ಕರ್ನಾಟಕ ವಿಧಾನ ಸಭೆ

ಬುಧವಾರ, ದಿನಾಂಕ ೭ನೇ ಜುಲೈ ೨೦೧೦ ರಂದು
ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು : ಶ್ರೀ ಕೆ. ಜಿ. ಬೋಪಯ್ಯ ರವರು ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾವಿಸಲಾದ ವಿಷಯಗಳು:–

ವಿಷಯ:– ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರ್ಕಾರದಿಂದ ಬೆಳಗಾವಿ ಗಡಿ ಸಮಸ್ಯೆಯ ಬಗ್ಗೆ ಸಲ್ಲಿಸಲಾದ ಪ್ರಮಾಣ ಪತ್ರದ ಬಗ್ಗೆ.

ಶ್ರೀ ಟಿ. ಬಿ. ಜಯಚಂದ್ರ (ಸಿರಾ): ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಹಳ ವರ್ಷಗಳಿಂದ ಕಗ್ಗಂಟಾಗಿ ಕರ್ನಾಟಕದ ಮುಂದೆ ಇದ್ದಂತಹ ವಿಚಾರ ಕೇಂದ್ರ ಸರ್ಕಾರ ರಾಜ್ಯದ ಪರವಾಗಿ ಆ ನಿಲುವನ್ನುಎತ್ತಿ ಹಿಡಿಯತಕ್ಕಂತಹ ರೀತಿಯಲ್ಲಿ ನಿರ್ಣಯ ಮಾಡಿ ತೀರ್ಮಾನ ಮಾಡಿ ಈಗಾಗಲೇ ಅಫಿಡವಿಟ್ ಹಾಕಿರತಕ್ಕಂತಹ ಹಿನ್ನೆಲೆಯಲಿ ಬಹುಶಃ ಇದು ಎಲ್ಲಾ ಪತ್ರಿಕೆಗಳಲ್ಲಿ ಬರದೇ ಇದ್ದರೂ ಕೂಡ ಒಂದ ಪ್ರಮುಖವಾದಂತಹ, ಇಡೀ ಕರ್ನಟಕದ ಆರು ಕೋಟಿ ಜನ ಮೆಚ್ಚುವಂತಹ ಒಂದು ವಿಚಾರವಾಗಿದೆ. ನಾವು ಅದರ ಒಕ್ಕಣೆ ಪತ್ರಿಕೆಯಲ್ಲಿ ಏನು ಬಂದಿದೆ ಅದನ್ನೇ ಕಡತಕ್ಕೆ ಹೇಳಿದರೆ ಒಳ್ಳೆಯದಾಗುತ್ತದೆ ಎನ್ನುವ ಭಾವನೆಯಿಂದ ನಾನು ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. "ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು, ಸುಪ್ರೀ ಕೋರ್ಟಿಗೆ ಕೇಂದ್ರದ ಪ್ರಮಾಣ ಪತ್ರ ಮಹಾರಾಷ್ಟ್ರಕ್ಕೆ ಮುಖ ಭಂಗ" ಬೆಳಗಾವಿ, ಗುಲ್ಬರ್ಗಾ, ಬೀದರ್ ಮತ್ತಿತರ ಗಡಿ ಭಾಗಗಳು ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದು, ಈ ಪ್ರದೇಶಗಳು ಅಭಾದಿತವಾಗಿ ಮುಂದುವರೆಯಲಿವೆ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿಗೆ ಮಂಗಳವಾರ ಪ್ರಮಾಣ ಪತ್ರ ಸಲ್ಲಿಸಿದೆ. ಇದರೊಂದಿಗೆ ರಾಜ್ಯದ ವಾದಕ್ಕೆ ಆನೆ ಬಲ ಬಂದಂತಾಗಿದೆ. ಈ ಪ್ರದೇಶಗಳು ತನಗೆ ಸೇರಬೇಕೆಂದು ಮಹಾರಾಷ್ಟ್ರ ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕು, ಇಂತಹ ಅನಗತ್ಯ ಅರ್ಜಿ ಸಲ್ಲಿಸಿದ್ದಕ್ಕಾಗಿ ಭಾರೀ ದಂಡ ಹಾಕಬೇಕೆಂದು ಕೇಂದ್ರ ಸರ್ಕಾರ ಹೇಳಿದೆ. ಅವರ ಅರ್ಜಿಗೆ ದಂಡ ಹಾಕಬೇಕು ಎನ್ನತಕ್ಕಂತಹ ರೀತಿಯಲ್ಲಿ ಅದನ್ನು ಶಿಕ್ಷೆ ರೂಪದಲ್ಲಿ ಹೇಳೀರತಕ್ಕಂಥದ್ದು ಬಹಳ ಮಹತ್ವವಾದ ವಿಚಾರ.

ನಾವೆಲ್ಲರೂ ಕೂಡ ಗಮನಿಸಬೇಕಾದ ವಿಚಾರ. ಯಾವುದೇ ಪ್ರದೇಶವನ್ನ ಯಾವುದೇ ರಾಜ್ಯಕ್ಕೆ ಸೇರ್ಪಡೆ ಮಾಡಲು ಹಲವು ಮಾನದಂಡಗಳನ್ನು ಅನುಸರಿಸಲಾಗುತ್ತದೆ. ಇದರಲ್ಲಿ ಭಾಷೆಯೂ ಒಂದು. ಆದರೆ ಅದು ಒಂದೇ ಮಾನದಂಡ ಅಲ್ಲವೆಂದು ಕೇಂದ್ರ ಸರ್ಕಾರ ಪ್ರಮಾಣ ಪತ್ರದಲ್ಲಿ ಪ್ರತಿಪಾದಿಸಿದೆ. ರಾಜ್ಯಗಳ ಪುನರ್‌ವಿಂಗಡಣೆ ಮಸೂದೆ ಹಾಗೂ ಮುಂಬೈ ಪುನರ್‌ರಚನೆ ಮಸೂದೆ ಚರ್ಚೆ ವೇಳೆ ಸಂಸತ್ತು ಕೇಂದ್ರ ಸರ್ಕಾರ ಎಲ್ಲಾ ಅಗತ್ಯ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಪ್ರತಿ ಹಳ್ಳಿ, ಪಟ್ಟಣ ಮತ್ತು ನಗರಗಳನ್ನು ಯಾವ ರಾಜ್ಯಕ್ಕೆ ಸೇರಿಸಬೇಕು ಎಂದು ತೀರ್ಮಾನ ಮಾಡಿದೆ ಎಂದು ಪ್ರಮಾಣ ಪತ್ರದಲಿ ಹೇಳಿದೆ. ಇದೊಂದು ಬಹಳ ಪ್ರಮುಖವಾಗಿರತಕ್ಕಂತಹ ವಿಚಾರ. ಬಹು ಸಂಖ್ಯಾತ ಮರಾಠಿಗರನ್ನು ಹೊಂದಿರುವ ಬೆಳಗಾವಿ, ಗುಲ್ಬರ್ಗ, ಬೀದರ್ ಹಾಗೂ ಕಾರವಾರ ಜಿಲ್ಲೆಗಳಲ್ಲಿ 814 ಗ್ರಾಮಗಳನ್ನು ಕರ್ನಾಟಕಕ್ಕೆ ತಪ್ಪಾಗಿ ಸೇರಿಸಲಾಗಿದೆ ಎಂಬ ನೆರೆ ರಾಷ್ಟ್ರದ ವಾದ ಸರಿಯಲ್ಲವೆಂದು ಕೇಂದ್ರ ಸರ್ಕಾರ ತಿಳಿಸಿದೆ. ಕಳೆದ ಆರು ವರ್ಷಗಳಿಂದ ನಡೆಯುತಿರುವ ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದ ಕುರಿತು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಕೆಲ ಪ್ರದೇಶಗಳನ್ನು ಹಿಂದಿನ ಮೈಸೂರು ರಾಜ್ಯಕ್ಕೆ ಸೇರ್ಪಡೆ ಮಾಡಿರುವ ತೀರ್ಮಾನ ಏಕ ಪಕ್ಷೀಯವೂ ಅಲ್ಲ, ಪ್ರಮಾದವೂ ಅಲ್ಲವೆಂದು ಕೇಂದ್ರ ಗೃಹ ಸಚಿವಾಲಯದ ನಿದೇಶಕ ಡಾ: ಪ್ರವೀಣ್ ಕುಮಾರ್ ಸಿಂಗ್ ರವರು ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ತಿಳಿಸಿದೆ. ಕೇಂದ್ರ ಸರ್ಕಾರ ರಾಜ್ಯಗಳ ಪುನರ್ ವಿಂಗಡಣೆ ಸಮಯದಲ್ಲಿ ಮರಾಠಿ ಭಾಷಿಗರಿಂದ ಕೆಲವು ಭಾಗಗಳನ್ನು ಸಂವಿಧಾನ ಬಾಹಿರವಾಗಿ ಕರ್ನಾಟಕಕ್ಕೆ ಸೇರಿಸುವ ತೀರ್ಮಾನ ಕೈಗೊಂಡಿತ್ತು ಎಂದು ಮಹಾರಾಷ್ಟ್ರ ರಾಜ್ಯ ಕಳೆದ ವರ್ಷ ಸಲ್ಲಿಸಿರುವ ಅರ್ಜಿಯಲ್ಲಿ ಆರೋಪಿಸಿದೆ. ರಾಜ್ಯ ಪುನರ್ ವಿಂಗಡಣಾ ಕಾಯ್ದೆ ಸೆಕ್ಷನ್ 7 (1) B ಮತ್ತು C Section 8 A ಮುಂಬೈ ಪುನರ್ ವಿಂಗಡಣೆ ಕಾಯಿದೆ ಸೆಕ್ಷನ್ 3(1)ರ ಸಂವಿಧಾನ ಬದ್ಧತೆ ಕುರಿತು ಅದು ಪ್ರಶ್ನಿಸಿದೆ. ಸಂವಿಧಾನದ ಕಲಂ 3ರ ಪ್ರಕಾರ ಸಂಸತ್ ಸಮರ್ಥನೀಯವಲ್ಲದ ಏಕ ಪಕ್ಷೀಯವಾದ ಅಧಿಕಾರವನ್ನು ಬಳಕೆ ಮಾಡಿದೆ ಎಂದು ಆ ರಾಜ್ಯ ದೂಷಿಸಿದೆ. ರಾಜ್ಯಗಳ ಪುನರ್ ವಿಂಗಡನೆ ವೇಳೆ ಭಾಷೆ, ಸಂಸ್ಕೃತಿ ಹಾಗೂ ಜನರ ಆಶಯ ಸೇರಿದಂತೆ ಕೆಲವು ಮಾನದಂಡಗನ್ನು ಪುನರ್ ವಿಂಗಡಣಾ ಆಯೋಗವು ಅನುಸರಿಸಿದೆ. ಅದರಲ್ಲಿ ಮಹಾರಾಷ್ಟ್ರ ಪುನರ್ ವಿಂಗಡಣಾ ಸಮಯದಲ್ಲಿ ಇದು ಯಾವ ತತ್ವಗಳನ್ನೂ ಅನುಸರಿಸಿಲ್ಲವೆಂದು ಆರೋಪಿಸಿದೆ. ಮಹಾರಾಷ್ಟ್ರದ ಅರ್ಜಿಗೆ ಉತ್ತರಿಸುವಂತೆ ಸುಪ್ರೀಂಕೋರ್ಟ್ ಕಳೆದ ಫೆಬ್ರವರಿಯಲ್ಲಿ ಕೇಂದ್ರ ಮತ್ತು ಕರ್ನಾಟಕ ರಾಜ್ಯಕ್ಕೆ ಆದೇಶಿಸಿತ್ತು. ಮುಂಬೈ ಹೈದರಾಬಾದ್ ಹಾಗೂ ಮದ್ರಾಸ್ ರಾಜ್ಯಗಳು ಹಾಗೂ ಕೊಡಗಿನ ಕೆಲವು

ಭಾಗಗಳನ್ನು ಸೇರ್ಪಡೆ ಮಾಡಿ ಮೈಸೂರು ರಾಜ್ಯ ಸ್ಥಾಪಿಸಲಾಗಿದೆ. ಬಹು ಸಂಖ್ಯಾತ ಮಾರಾಠಿ ಭಾಷಿಕರ ಬಾಷೆಯನ್ನು ಇದಕ್ಕೆ ಸೇರಿಸಲಾಗಿದೆ ಎಂದು ಮಹಾರಾಷ್ಟ್ರ ಟೀಕಿಸಿದೆ. ಮಾರಾಠಿಗರ ತೀವ್ರ ವಿರೋಧದ ನಡುವೆಯೂ ಈ ಕ್ರಮ ಕೈಗೊಳ್ಳಲಾಗಿದೆ. ಬಹುಶಃ ಇನ್ನೊಂದು ಬಹಳ ಮುಖ್ಯವಾದ ವಿಚಾರ ಎಂದರೆ, ನಾವು ನಿರ್ದಿಷ್ಟ ಸಮುದಾಯಗಳನ್ನು ಆಯಾ ಭಾಷೆಗೆ ಪ್ರದೇಶಕ್ಕೆ ಸೇರಿಸಲಾಗದು. ಹೀಗೆ ಸೇರಿಸಬೇಕೆಂದು ಅಗ್ರಹಿಸುವುದು ದೇಶದ ಸಮಗ್ರತೆಗೆ ವಿರುದ್ಧವಾದುದು ಎಂದು ರಾಜ್ಯಗಳ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರಾದ ಫಸಲ್ ಆಲಿ ಖಡಾ ಖಂಡಿತವಾಗಿ ಹೇಳಿ ಮಹಾರಾಷ್ಟ್ರದ ವಾದವನ್ನು ತಳ್ಳಿ ಹಾಕಿದರು. ಇದೇ ಅಭಿಪ್ರಾಯವನ್ನು ಮಹಾರಾಷ್ಟ್ರ ಕರ್ನಾಟಕ ಗಡಿ ವಿವಾದವನ್ನು ಅಧ್ಯಯನ ಮಾಡಲು ರಚಿತವಾಗಿದ್ದ ಮಹಾಜನ್ ಆಯೋಗ ಕೂಡ ಹೇಳಿತು. ಈಗ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿನ ಮುಂದೆ ಸಲ್ಲಿಸಿರುವ ಪ್ರಮಾಣ ಪತ್ರವೂ ಅದೇ ಅಭಿಪ್ರಾಯವನ್ನು ಒತ್ತಿ ಹೇಳಿದೆ. ಬಹುಶಃ ಕರ್ನಾಟಕದ ಪಾಲಿಗೆ ಇದು ಒಂದು ಐತಿಹಾಸಿಕ ಜಯ ಎಂದು ಭಾವಿಸಿದರೆ ತಪ್ಪಾಗಲಾರದು. ಈಗಾಗಲೇ ಬೆಳಗಾವಿ ನಮ್ಮದು, ಅದು ಮರಾಠಿಗರದು ಅಲ್ಲ ಎನ್ನತಕ್ಕಂತಹ ದೃಷ್ಟಿಯಲ್ಲಿ ಅದಕ್ಕೆ ಹಿಂದೆ ಇದ್ದ ಸರ್ಕಾರಗಳು ಇರಬಹುದು, ಈಗಿನ ಸರ್ಕಾರ ಕೂಡ ಹೆಚ್ಚಿನ ಆಸಕ್ತಿ ವಹಿಸಿ ಈಗಾಗಲೇ ವಿಧಾನಸೌಧವನ್ನು ಕಟ್ಟುವಂತಹ ರೀತಿಯಲ್ಲಿ ಮುಂದಿನ ವರ್ಷ ಸದನವನ್ನೂ ಅಲ್ಲಿ ನಡೆಸುವಂತಹ ವಾತಾವರಣ ಸೃಷ್ಟಿಯಾಗಿರತಕ್ಕಂತಹ ರೀತಿಯಲ್ಲಿ ಬಂಡವಾಳ ಹಾಕಿರತಕ್ಕಂಥದ್ದು ಬಹಳ ಸಂತೋಷದ ಸಂಗತಿ. ಹೋದ ಬಾರಿ ನಾವು ಬೆಳಗಾವಿ ಅಧಿವೇಶನವನ್ನು ಕರೆಯುವಂತಹ ಸಂದರ್ಭದಲ್ಲಿ ಅಲ್ಲಿ ಸ್ಥಳೀಯವಾಗಿರತಕ್ಕಂತಹ ಮರಾಠಿಗರಿಂದ ಹಾಗೂ ಹೊರ ರಾಜ್ಯದವರೂ ಕೂಡ ಪ್ರಚೋದನೆ ಮಾಡಿ ಗಲಾಟೆ ಮಾಡಿ ಪ್ರಕ್ಷುಬ್ದವಾದ ವಾತಾವರಣವನ್ನು ಸೃಷ್ಠಿ ಮಾಡತಕ್ಕಂತಹ ಕೆಲಸವನ್ನೂ ಕೂಡ ಮಾಡಿದ್ದರು. ನಮ್ಮ ರಾಜ್ಯದಲ್ಲಿ ಸದನವನ್ನೂ ನಡೆಸತಕ್ಕಂಥದ್ದು ಕಷ್ಟ ಎನ್ನತಕ್ಕಂತಹ ರೀತಿಯಲ್ಲಿ ವಾತಾವರಣ ಆಗಿದ್ದಕ್ಕೆ ಇದಕ್ಕೆ ಅಂತಿಮ ಇತಿಶ್ರೀ ಹಾಕತಕ್ಕಂತಹ ರೀತಿಯಲ್ಲಿ ಕೇಂದ್ರ ಸರ್ಕಾರ ಸ್ಪಂದಿಸಿದೆ. ನಾವು ಎಲ್ಲೋ ಒಂದು ಕಡೆ ಕೇಂದ್ರ ಸರ್ಕಾರದ ನಿಲುವನ್ನು ಸುಪ್ರೀಂ ಕೋರ್ಟಿನಲ್ಲಿ ಮಂಡಿಸತಕ್ಕಂತಹ ವಾದಕ್ಕೆ ಸಮರ್ಥನೆ ಮಾಡತಕ್ಕಂತಹ ರೀತಿಯಲ್ಲಿ ಆ ಒಂದು ನಿರ್ಣಯವನ್ನು ಮಾಡಿ ಇವತ್ತು ಕೇಂದ್ರ ಸರ್ಕಾರಕ್ಕೆ ಹೇಳತಕ್ಕಂಥದ್ದು ಒಳ್ಳೆಯದು. ಕೇಂದ್ರ ಸರ್ಕಾರದಲ್ಲಿ ಯಾವುದೇ ಒಳ್ಳೆಯ ಕೆಲಸಗಳು ಆದಾಗ ಪ್ರಶಂಸಿಸಬೇಕು. ಪೆಟ್ರೋಲ್ ದರ ಜಾಸ್ತಿಯಾದಂತಹ ಸಂದರ್ಭದಲ್ಲಿ ಬೀದಿಗೆ ಇಳಿದು ಪ್ರತಿಭಟನೆ ಮಾಡತಕ್ಕಂತಹ ಕೆಲಸವನ್ನು ಮಾಡಿದರು. ಅದನ್ನು ಮಿಕ್ಸ್ ಅಪ್ ಮಾಡುವುದಿಲ್ಲ. ಆದರೆ ಇವತ್ತು ಇಂತಹ ಒಂದು ಐತಿಹಾಸಿಕವಾದ ನಿರ್ಣಯ ಅದು ಕರ್ನಾಟಕ ಸರ್ಕಾರದ

ಒತ್ತಾಸೆಯೂ ಇತ್ತು. ಮಹಾಜನ್ ಆಯೋಗವೇ ಅಂತಿಮ ಎನ್ನತಕ್ಕಂತಹ ವಾದವನ್ನು ಒಂದಲ್ಲ ನೂರಾರು ಬಾರಿ ನಾವು ದೆಹಲಿಗೆ ಹೋಗಿ ಹೇಳಿದಂತಹ ಸಂದರ್ಭದಲ್ಲಿ ಇವತ್ತು ನಮಗೆ ಜಯ ಸಿಕ್ಕಿದೆ. ಅದಕ್ಕೆ ಕರ್ನಾಟಕ ಸರ್ಕಾರದಿಂದ ಸಂಪೂರ್ಣವಾದ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸತಕ್ಕಂತಹ ಕೆಲಸವನ್ನು ಮಾಡತಕ್ಕಂಥದ್ದು ಸೂಕ್ತ ಎನ್ನತಕ್ಕಂತಹ ಪ್ರಸ್ತಾವವನ್ನು ಇಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರ ಬೆಳಗಾವಿ ಹಾಗೂ ಮತ್ತಿತರ ಗಡಿ ಭಾಗಗಳು ಕರ್ನಾಟಕದ ಅವಿಭಾಜ್ಯ ಅಂಗವೆಂದು ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿರುವಂಥದ್ದು ಅತ್ಯಂತ ಸಂತೋಷದ ಸಂಗತಿ ಕನ್ನಡ ನಾಡಿನ 6 ಕೋಟಿ ಜನರ ಪರವಾಗಿ ಕೇಂದ್ರದ ನಮ್ಮ ಪ್ರಧಾನಿ ಮಾನ್ಯ ಮನಮೋಹನ್‌ಸಿಂಗ್‌ಜಿಯವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇವತ್ತೇ ಅವರಿಗೆ ಅಭಿನಂದನೆಯನ್ನು ಸಲ್ಲಿಸಿ ಒಂದು ಪತ್ರವನ್ನೂ ಕೂಡ ನಾನು ಬರೆಯುತ್ತೇನೆ. ಮಹಾಜನ್ ಆಯೋಗದ ವರದಿಯನ್ನು ಉಭಯ ರಾಜ್ಯಗಳು ಒಪ್ಪಿ ವರದಿಯನ್ನು ಕೊಟ್ಟ ಮೇಲೂ ಕೂಡ ತಮ್ಮ ರಾಜಕೀಯ ಬೇಳೆ ಬೇಯಿಸಕೊಳ್ಳುವುದಕ್ಕೋಸ್ಕರ ಆಗಾಗ್ಗೆ ಗೊಂದಲವನ್ನುಂಟು ಮಾಡಿ, ಕನ್ನಡಿಗರು ಮತ್ತು ಮರಾಠಿಗರು ಒಂದೇ ತಾಯಿಯ ಮಕ್ಕಳಂತೆ ಸೌಹಾರ್ಧಯುತವಾಗಿ ಬದುಕುತ್ತಿರುವುದನ್ನು ಸಹಿಸದೆ ಗೊಂದಲವನ್ನುಂಟು ಮಾಡುವಂಥದ್ದು, ಮಹಾರಾಷ್ಟ್ರ ವಿಧಾನಸಭೆಯಲ್ಲಿ ಆಗಾಗ್ಗೆ ನಾವು ಇಲ್ಲಿ ತೆಗೆದುಕೊಳ್ಳುತ್ತಿರುವ ನಿರ್ಧಾರಗಳ ಬಗ್ಗೆ ಮತ್ತು ಮೇಯರ್‌ರವರನ್ನು ಆಯ್ಕೆ ಮಾಡಿದುದರ ಬಗ್ಗೆಯೂ ಸೇರಿದಂತೆ ಈ ವಿಷಯಗಳ ಬಗ್ಗೆ ಅಲ್ಲಿ ಚರ್ಚೆ ಮಾಡಿ ಗೊಂದಲವನ್ನುಂಟು ಮಾಡುವಂಥದ್ದು, ಇದಲ್ಲದೇ ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ ಬಂದು ಇಲ್ಲಸಲ್ಲದ ಹೇಳಿಕೆಗಳನ್ನು ಕೊಟ್ಟು ಜನಗಳ ಸೌಹಾರ್ದಯುತವಾದ ಸಂಬಂಧವನ್ನು ಹಾಳು ಮಾಡುವಂತದ್ದು, ಈ ರೀತಿ ಅನೇಕ ಘಟನಾವಳಿಗಳು ಅನೇಕ ವರ್ಷದಿಂದ ನಡೆದುಕೊಂಡು ಬರುತ್ತಿದೆ. ಇವತ್ತು ಅವುಗಳಿಗೆ ಇತಿಶ್ರೀ ಹಾಡುವ ರೀತಿಯಲ್ಲಿ ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಅರ್ಜಿ ಸಲ್ಲಿಸಿರುವಂಥದ್ದು ನನಗೆ ತುಂಬ ಸಂತೋಷ ತಂದಿದೆ. ಮಹಾಜನ್ ವರದಿಯಲ್ಲಿ ಹೇಳಿರುವಂತೆ ಬೆಳಗಾವಿ, ಗುಲ್ಬರ್ಗಾ ಮತ್ತು ಬೀದರ್‌ನ ಕೆಲವು ಹಳ್ಳಿಗಳು ಕರ್ನಾಟಕಕ್ಕೆ ಸೇರಿದೆ. ಕೇಂದ್ರ ಸರ್ಕಾರ ಮಹಾರಾಷ್ಟ್ರಕ್ಕೆ ಸಮರ್ಪಕವಾದ ಉತ್ತರವನ್ನು ಈಗ ನೀಡಿದೆ. ಇನ್ನುಮುಂದಾದರೂ ಮಹಾರಾಷ್ಟ್ರ ಸರ್ಕಾರ ಗಡಿ ವಿಚಾರದಲ್ಲಿ ಮತ್ತೆ ಮತ್ತೆ ತಂಟೆ ತಕರಾರನ್ನು ಮಾಡದೆ ನೆರೆಹೊರೆ ರಾಜ್ಯಗಳೊಂದಿಗೆ ಸೌಹಾರ್ಧದಿಂದ

ಇರುವಂಥದ್ದು ಸೂಕ್ತ ಎನ್ನುವಂಥ ಸಲಹೆಯನ್ನು ನಾನು ಈಗ ಕೊಡುತ್ತೇನೆ. ಮತ್ತೊಮ್ಮೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟಿಗೆ ಸಲ್ಲಿಸಿರುವ ಮನವಿ ಪತ್ರದ ಪ್ರತಿ ನನಗೆ ದೊರೆತ ನಂತರ ಈ ಬಗ್ಗೆ ಹೆಚ್ಚಿನ ಮಹಿತಿಯನ್ನು ನಾನು ನೀಡುತ್ತೇನೆ. ಇನ್ನು ಎರಡನೆಯದಾಗಿ ಈಗಾಗಲೇ ನಮ್ಮ ಇಡೀ ಸದನದ ಒಕ್ಕೊರಲಿನ ಅಭಿಪ್ರಾಯದಂತೆ ಸುವರ್ಣ ಸೌಧದ ಕೆಲಸ ಬೆಳಗಾವಿಯಲ್ಲಿ ನಡೆಯುತ್ತಿದೆ. ಈ ನವೆಂಬರ್ ಕೊನೆಯೊಳಗಾಗಿ ನಾವು ಅಧಿವೇಶನವನ್ನು ನಡೆಸುವಷ್ಟು ಅಗತ್ಯವಿರುವಷ್ಟು ಕಟ್ಟಡವನ್ನು ಪೂರ್ಣ ಮಾಡಬೇಕೆಂದು ಮೊನ್ನೆ ತಾನೆ spot inspection ಮಾಡಿದಂಥ ಸಂದರ್ಭದಲ್ಲಿ ಅಧಿಕಾರಿಗಳಿಗೆ ನಾನು ಸೂಚನೆ ಕೊಟ್ಟು ಬಂದಿದ್ದೇನೆ. ಈ ರೀತಿ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ಒಂದು ಮನವಿ ಮಾಡುವಂಥ ಕಾಲದಲ್ಲಿ, ಅರ್ಜಿಯನ್ನು ಸಲ್ಲಿಸಿರುವಂಥ ಕಾಲದಲ್ಲಿ ಸುಮಾರು ಹದಿನೈದು ದಿವಸಗಳ ಕಾಲ ಚಳಿಗಾಲದ ಅಧಿವೇಶನವನ್ನು ಅಲ್ಲಿ ನಡೆಸುವುದರ ಮೂಲಕ ನಮ್ಮ ಸಂತೋಷವನ್ನು ಹಂಚಿಕೊಳ್ಳುವಂಥ ಒಂದು ಅವಕಾಶ ನಮಗೆ ಸಿಗುತ್ತದೆ. ಆದುದರಿಂದ ಆದಷ್ಟು ಬೇಗ ಆ ಕಟ್ಟಡವನ್ನು, ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಅಧಿವೇಶನ ನಡೆಸುವ ಹಾಲ್‌ಗಳ ನಿರ್ಮಾಣ ಕೆಲಸವನ್ನು ಪೂರ್ಣ ಮಾಡಿಸಿ ಅದರ ಉದ್ಘಾಟನೆಯನ್ನೂ ಕೂಡ ಆವತ್ತು ಇಟ್ಟುಕೊಂಡು ಸಂಭ್ರಮದ ಒಂದು ಅಧಿವೇಶನವನ್ನು ಬೆಳಗಾವಿಯಲ್ಲಿ ಮಾಡೋಣ. ಇಂದು ಇಡೀ ಕರ್ನಾಟಕದ ಕನ್ನಡ ನಾಡಿನ ಜನ ಕೇಂದ್ರದ ನಿಲುವಿಗೆ ಸಂತೋಷವನ್ನು ವ್ಯಕ್ತಮಾಡಿದ್ದಾರೆ.ನಾನು ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ವೈಯಕ್ತಿಕವಾಗಿ ನಾನು ಪ್ರಧಾನಿಯವರನ್ನು ಭೇಟಿ ಮಾಡಿ ಕನ್ನಡ ನಾಡಿನ ಜನರ ಭಾವನೆಗಳನ್ನು ಹಂಚಿಕೊಂಡು ಪತ್ರವನ್ನು ಬರೆದು ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುವುದಕ್ಕೆ ನಮ್ಮ ಸರ್ಕಾರ ಸಂಪೂರ್ಣವಾಗಿ ಒಕ್ಕೊರಿಲಿನಿಂದ ಇದ್ದು ನಾವು ಆ ಕೆಲಸವನ್ನು ಮಾಡೋಣ, ಬೇಕಾದರೆ ಪ್ರಧಾನಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಸರ್ವ ಪಕ್ಷಗಳ ನಿಯೋಗ ಹೋಗೋಣ. ಏಕೆಂದರೆ ಕೇಂದ್ರದಿಂದ ರಾಜ್ಯಕ್ಕೆ ಬಹಳಷ್ಟು ಒಳ್ಳೆಯ ಕೆಲಸಗಳು ಇನ್ನು ಆಗಬೇಕಾಗಿದೆ. ನನಗನಿಸುತ್ತದೆ. ಇವರು ಪ್ರಧಾನಿಯಾದ ಮೇಲೆ ನಾನು ಬಹಳ ಸಾರಿ ಹೇಳಿದ್ದೇನೆ, ಘರ್ಷಣೆ ಪ್ರಶ್ನೆ ಇಲ್ಲ, ನಮ್ಮ ರಾಜ್ಯಕ್ಕೆ ಆಗಬೇಕಾಗಿರುವ ಕೆಲಸ ಕಾರ್ಯಗಳನ್ನು ನಾವು ಮಾಡಿಸಿಕೊಳ್ಳೋಣವೆಂದು ಹೇಳಿದ್ದೇನೆ. ಕೇಂದ್ರವನ್ನು ಪ್ರತಿನಿಧಿಸುತ್ತಿರುವ ನಮ್ಮ ರಾಜ್ಯದ ಸಂಸತ್ ಸದಸ್ಯರು ಯಾರಿದ್ದಾರೆ ಅವರೂ ಕೂಡ ಎಲ್ಲ ರೀತಿಯ ಸಹಕಾರವನ್ನು ನಮಗೆ ನೀಡಿದ್ದಾರೆ. ಆದುದರಿಂದ ಎಲ್ಲರನ್ನೂ ಕರೆದುಕೊಂಡು ಹೋಗಿ ಪ್ರಧಾನಿಯವರಿಗೆ ಅಭಿನಂದನೆಯನ್ನು ಕನ್ನಡ ನಾಡಿನ ಜನರ ಪರವಾಗಿ ಸಲ್ಲಿಸೋಣ,

ಇದಕ್ಕಾಗಿ ಒಂದು ದಿನಾಂಕ ನಿಶ್ಚಯ ಮಾಡಿ ನಾವು ದೆಹಲಿಗೆ ಹೋಗಿ ಬರೋಣ. ಅದಕ್ಕೆ ಮುಂಚೆ ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಸಲ್ಲಿಸಿರುವಂಥ ಪೂರ್ಣ ಮನವಿ ಪತ್ರದ ಪ್ರತಿ ನನಗೆ ದೊರೆತ ಮೇಲೆ ಉಳಿದಂಥ ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇನೆ. ಒಟ್ಟಿನಲ್ಲಿ ಕೇಂದ್ರ ಸರ್ಕಾರ ರಾಜ್ಯದ ಪರವಾಗಿ ಒಂದು ಅಫಿಡೆವಿಟನ್ನು ಫೈಲ್ ಮಾಡಿರುವುದರಿಂದ ನಮಗೆಲ್ಲರಿಗೂ ಸಂತೋಷವಾಗಿದೆ. ಆದಕಾರಣ ಪ್ರಧಾನಿಯವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಪ್ರಶ್ನೋತ್ತರ

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಬಗ್ಗೆ

106 (195) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ):– ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ನೇರ ನೇಮಕಾತಿ ಮೂಲಕ ತುಂಬಲಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಸರ್ಕಾರವು ಒಟ್ಟು ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿತ್ತು;

ಆ) ಪರೀಕ್ಷೆ ನಡೆಸುವ ಜವಾಬ್ದಾರಿಯನ್ನು ಯಾವ ಆಧಾರದಲ್ಲಿ ಯಾವ ಸಂಸ್ಥೆಗೆ ವಹಿಸಿಕೊಡಲಾಗಿತ್ತು;

ಇ) ಪ್ರತಿ ಅರ್ಜಿದಾರರಿಂದ ಎಷ್ಟು ಶುಲ್ಕವನ್ನು ಪರೀಕ್ಷೆ ಹಾಗೂ ಇತರ ಶುಲ್ಕವೆಂದು ವಸೂಲಿ ಮಾಡಲಾಗಿದೆ;

ಈ) ಪರೀಕ್ಷೆಯಲ್ಲಿ ತೇರ್ಗಡೆಯಾದ ಎಷ್ಟು ಮಂದಿಗೆ ನೇಮಕಾತಿ ಆದೇಶ ನೀಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು);

ಉ) ಪರೀಕ್ಷೆ ನಡೆಸಿದ ಸಂಸ್ಥೆಗೆ ಸರ್ಕಾರದಿಂದ ಎಷ್ಟು ಅನುದಾನವನ್ನು ಸೇವಾ ಶುಲ್ಕವನ್ನು ನೀಡಲಾಗಿದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಸಚಿವರು):–